**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 1137/2024**

**ಸಾಕ್ಷಿಯನ್ನು ದಿಃ 28-01-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ.PKR ವಕೀಲರಿಂದಃ**

ಆರೋಪಿ 2-3 ಬಾರಿ ಬಂದು ನನ್ನ ಬಳಿ ಹಣ ಕೇಳಿದರು. ಆ ಸಮಯದಲ್ಲಿ ಬೇರೆ ಯಾರಿದ್ದರು ಎಂದರೆ ಯಾರೂ ಇರಲಿಲ್ಲ. ಆರೋಪಿ ನನ್ನ ಬಳಿ ಹಣ ಕೇಳಿದ ತಾರೀಖ, ತಿಂಗಳು, ಇಸವಿ ನೆನಪಿಲ್ಲ. ಆರೋಪಿ ಈಗಲೂ ಕೂಡ ದಿನ ಒಂದಕ್ಕೆ ರೂ.300 ರಂತೆ ಕೂಲಿ ಕೆಲಸಕ್ಕೆ ಹೋಗುತ್ತಾರೆ ಎಂದರೆ ಗೊತ್ತಿಲ್ಲ. ದಿನಒಂದಕ್ಕೆ ರೂ.300 ರಂತೆ ಕೂಲಿ ಕೆಲಸಕ್ಕೆ ಹೋಗುವ ಆರೋಪಿಗೆ ನನ್ನಿಂದ ರೂ.2 ಲಕ್ಷ ಸಾಲ ಪಡೆದುಕೊಳ್ಳುವ ಅರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಯಾವ ಆಧಾರದ ಮೇಲೆ ಆರೋಪಿಗೆ ಹಣ ಕೊಟ್ಟಿದ್ದೀರಿ ಎಂದರೆ ಆರೋಪಿಯ ಮನೆಯ ಜನ ದುಡಿಯುತ್ತಿದ್ದರು. ವ್ಯಾಪಾರ ಮಾಡುತ್ತಿದ್ದರು. ಅದರ ಆಧಾರದ ಮೇಲೆ ಸಾಲ ಕೊಟ್ಟಿದ್ದೇನೆ. ಆರೋಪಿಯ ಮನೆಯವರು ಮೊದಲು ತರಕಾರಿ ವ್ಯಾಪಾರ ಮಾಡುತ್ತಿದ್ದರು. ಒಂದೊಂದು ಸಾರಿ ಒಂದೊಂದು ವ್ಯಾಪಾರ ಮಾಡುತ್ತಾರೆ. ಆರೋಪಿಯ ಮನೆಯ ಸದಸ್ಯರು ದುಡಿದು ಹಣ ವಾಪಸ್ಸು ಮಾಡುತ್ತಾರೆ ಎಂದು ನೀವು ಸಾಲ ಕೊಟ್ಟಿದ್ದೀರಾ ಎಂದರೆ ಇಲ್ಲ. ಆರೋಪಿಗೆ ಸಾಲ ಕೊಡುವಾಗ ಅವರ ಗಂಡ ಮತ್ತು ಮಕ್ಕಳನ್ನು ಕೇಳಿದ್ದಿರಾ ಎಂದರೆ ಇಲ್ಲ. ಆರೋಪಿಯ ಗಂಡ ತಾನು ದುಡಿದು ಸಾಲ ತೀರಿಸುವುದಾಗಿ ನನ್ನ ಬಳಿ ಹೇಳಿಲ್ಲ. ಆ ಸಮಯದಲ್ಲಿ ನನ್ನ ಬಳಿ ರೂ. 2 ಲಕ್ಷ ನಗದು ಹಣ ಇತ್ತು ಎಂದು ತೋರಿಸುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸದೇ ಇರುವ ಕಾರಣ ನಾನು ಆರೋಪಿಗೆ ರೂ.2 ಲಕ್ಷ ಸಾಲ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಕ್ಕೆ BPL Cardನೀಡುವ ಕಾರಣ ಹಾಗೂ ನಾನು ಕೂಡ BPL card ಹೊಂದಿರುವುದರಿಂದ ರೂ.2 ಲಕ್ಷ ಸಾಲ ಕೊಡುವಷ್ಟು ಅರ್ಥಿಕ ಸಾಮರ್ಥ್ಯ ನನಗೆ ಇರಲಿಲ್ಲ ಎಂದರೆ ಸರಿಯಲ್ಲ.

ನಿಪಿ-1ರ ಚೆಕ್ ನಲ್ಲಿ ನಿಪಿ-1(ಎ) ಸಹಿ ಮತ್ತು ಉಳಿದ ಬರವಣಿಗೆಗಳು ಬೇರೆ ಬೇರೆ ಇಂಕಿನಲ್ಲಿವೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆರೋಪಿ ಮೊದಲು ಒಂದು ಪೆನ್ನಿನಲ್ಲಿ ಸಹಿ ಹಾಕಿ ನಂತರ ಇನ್ನೊಂದು ಪೆನ್ನಿನಲ್ಲಿ ಉಳಿದ ಬರವಣಿಗೆಗಳನ್ನು ನನ್ನ ಸಮಕ್ಷಮ ಮಾಡಿ ನೀಡಿದ್ದಾರೆ ಎಂದು ನುಡಿಯುತ್ತಾರೆ. ಆರೋಪಿ ಎರಡು ಪೆನ್ನು ತಂದಿದ್ದರೇ ಎಂದರೆ ಅವರ ಬ್ಯಾಗ್ ನಲ್ಲಿ ಏನೇನು ಇತ್ತು ಎಂದು ನನಗೆ ಗೊತ್ತಿಲ್ಲ. ಬೇರೆ ಬೇರೆ ಪೆನ್ನುಗಳಲ್ಲಿ ಚೆಕ್ ಬರೆಯುತ್ತಿದ್ದಿರಿ ಎಂದು ಆರೋಪಿಯನ್ನು ಕೇಳಲಿಲ್ಲವೇ ಎಂದರೆ ಆ ಬಗ್ಗೆ ನನಗೆ ಗೊತ್ತಾಗಲಿಲ್ಲ. ನಾನು ಮತ್ತು ನನ್ನ ತಾಯಿ ಚೀಟಿ ವ್ಯವಹಾರ ಮಾಡುತ್ತಿದ್ದು, ಅದರ ಸಲುವಾಗಿ ಖಾಲಿ ಚೆಕ್ ಗಳನ್ನು ಪಡೆದುಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ಚೀಟಿ ವ್ಯವಹಾರಕ್ಕೆ ಚೆಕ್ಕನ್ನು ಪಡೆದುಕೊಂಡು ಸದರಿ ವ್ಯವಹಾರದ ಲೆಡ್ಜರ್ ಪಿಪುಸ್ತಕದಲ್ಲಿ ಪಡೆದ ಸಹಿಯನ್ನೇ ಉಪಯೋಗಿಸಿ ನಿಪಿ-1(ಎ) ಸಹಿಯನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1(ಎ) ಸಹಿ ಮತ್ತು ನಿಪಿ-5 ರಲ್ಲಿರುವ ಸಹಿ ವ್ಯತ್ಯಾಸದಿಂದ ಕೂಡಿದೆ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ರೂ.2 ಲಕ್ಷ ಸಾಲ ಪಡೆದುಕೊಂಡಿಲ್ಲ ಹಾಗೂ ನಿಪಿ-1(ಎ) ಚೆಕ್ಕನ್ನು ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅನ್ಯತಾ ಫಾಯಿದೆ ಪಡೆಯುವ ಉದ್ದೇಶದಿಂದ ಸುಳ್ಳು ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.